ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/ಎನ್‌ಬಿಎ/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ: 9.6.2016

**ಸುತ್ತೋಲೆ**

ವಿಷಯ: ಸ್ವಯಂ ಮೌಲ್ಯಮಾಪನ ವರದಿಗಳನ್ನು(e-SAR) upload ಮಾಡುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಅನುಬಂಧ-1 ರಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್‌ಗಳು ರಾಷ್ಟ್ರೀಯ ಮಾನ್ಯತಾ ಮಂಡಳಿ, ನವದೆಹಲಿ, ಇವರಲ್ಲಿ ನೊಂದಾಯಿಸಲಾಗಿದ್ದು, ಸದರಿ ಸಂಸ್ಥೆಗಳ ವಿವಿಧ ಪ್ರೋಗ್ರಾಂಗಳ ಸ್ವಯಂ ಮೌಲ್ಯಮಾಪನಾ ವರದಿಗಳನ್ನು (SAR) ನಿರ್ದೇಶನಾಲಯದಲ್ಲಿ ಪರಿಶೀಲಿಸಿ ಕೆಲವು ಶಿಫಾರಸ್ಸುಗಳೊಂದಿಗೆ ಸಂಸ್ಥೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ. ಅದರಂತೆ ಅನುಬಂಧ-1 ರಲ್ಲಿ ನಮೂದಿಸಿರುವ ಸಂಸ್ಥೆಗಳು, ವಿವಿಧ ಪ್ರೋಗ್ರಾಂಗಳಿಗೆ ಮಾನ್ಯತಾ ಸಂಬಂಧ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಂಸ್ಥೆಯಲ್ಲಿ ಕೈಗೊಂಡು ಹಾಗೂ ಅದಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಎನ್.ಬಿ.ಎ ಫೈಲುಗಳಲ್ಲಿ ದಾಖಲಿಸುವಂತೆ ತಿಳಿಸಲಾಗಿದೆ.

ಮುಂದುವರೆದು, ಸದರಿ ಸಂಸ್ಥೆಗಳು ಅನುಬಂಧ-2 ರಲ್ಲಿ ಸೂಚಿಸಿರುವ Pre Qualifier ಪ್ರಪತ್ರದಂತೆ ತಮ್ಮ ಸಂಸ್ಥೆಯಲ್ಲಿ ಮಾನ್ಯತೆ ಪಡೆಯಲು ಅರ್ಹರಾಗಿರುವ ಕನಿಷ್ಠ ಎರಡು ಪ್ರೋಗ್ರಾಂಗಳ Pre Qualifier ವರದಿಗಳನ್ನು ತುಂಬಿ ನಿರ್ದೇಶನಾಲಯದ ಮಾನ್ಯತಾ ಕೋಶದ ಮಿಂಚಂಚೆ ವಿಳಾಸ dtenba@gmail.com ಗೆ ದಿನಾಂಕ: **30.06.2016** ರೊಳಗಾಗಿ ತಪ್ಪದೆ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

ತದನಂತರ ನಿರ್ದೇಶನಾಲಯದಿಂದ ನೇಮಿಸಲ್ಪಟ್ಟ ತಂಡವು ಸಂಸ್ಥೆಗೆ ಭೇಟಿ ನೀಡಿ ಸಂಬಂಧಪಟ್ಟ ಪ್ರೋಗ್ರಾಂಗಳ Pre Qualifier ವರದಿಗಳನ್ನು ಸಂಸ್ಥೆಗಳಲ್ಲಿನ ವಸ್ತುಸ್ಥಿತಿಯೊಂದಿಗೆ ಪರಿಶೀಲಿಸಿದ ನಂತರ ಸ್ವಯಂ ಮೌಲ್ಯಮಾಪನ ವರದಿಗಳನ್ನು (e-SAR) ಗಳನ್ನು ಎನ್.ಬಿ.ಎ ಇ-ಪೋರ್ಟಲ್‌ನಲ್ಲಿ upload ಮಾಡಲು ಹಾಗೂ ಈಗಾಗಲೇ ಕೆಲ ಸಂಸ್ಥೆಗಳಿಗೆ ನೊಂದಣಿ ಶುಲ್ಕದ ಬಿಡುಗಡೆ ಅನುದಾನ ಮರು ಹೊಂದಾಣಿಕೆಗೆ ಪ್ರೋಗ್ರಾಂಗಳ ಶುಲ್ಕವಾಗಿ ಪರಿವರ್ತಿಸಿ ಮಾನ್ಯತಾ ಮಂಡಳಿಗೆ ಸಂದಾಯ ಬೇಕಾಗಿರುವುದರಿಂದ ನಿಗದಿತ ದಿನಾಂಕದೊಳಗೆ Pre Qualifier ಗಳನ್ನು ಭರ್ತಿಮಾಡಿ ಕಳುಹಿಸಲು ಸೂಚಿಸಲಾಗಿದೆ.

ನಿರ್ದೇಶಕರು
9/6/16

ಗೆ,

1 ಸಂಬಂಧಪಟ್ಟ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
2 ಮಾನ್ಯ ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ
3 ಇ-ಆಡಳಿತ ಸಂಯೋಜಕರ ಸೂಕ್ತ ಕ್ರಮಕ್ಕಾಗಿ.